**ದಿಃ 14.07.2023** **ಸಿಸಿ 1325/2020**

ಸಾಕ್ಷಿಯನ್ನು ಪುನಃ ಕರೆಯಿಸಿ ಕ್ರಮಬದ್ಧವಾಗಿ ಪ್ರಮಾಣೀಕರಿಸಲಾಗಿದೆ. **ಪಿಡಬ್ಲ್ಯೂ 1**

**ಮುಂದುವರೆದ ಪಾಟೀ ಸವಾಲುಃ** ಅರೋಪಿ ಪರ ಶ್ರೀ ಯು. ಹೆಚ್. ವಕೀಲರಿಂದಃ

ಈ ಮೊದಲು 2017 ರಲ್ಲಿ ಮನೆ ಕಟ್ಟಿದ್ದೇನೆ ಎಂದು ಹೇಳಿದ್ದು, ಅದನ್ನು ಕಟ್ಟಲು ಸುಮಾರು 20 ಲಕ್ಷ ರೂ. ಖರ್ಚಾಗಿರುತ್ತದೆ. ಮನೆ ಕಟ್ಟಲು ನಾನು ಬ್ಯಾಂಕಿನಲ್ಲಾಗಲೀ ಅಥವಾ ಬೇರೆಯರಿಂದ ಸಾಲವನ್ನು ಪಡೆದಿಲ್ಲ. 2017 ರಲ್ಲಿ ನನ್ನ ಬಳಿ ಅಷ್ಟು ಹಣ ಇದ್ದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ಆರೋಪಿಯ ಯಜಮಾನರನ್ನು ನಾನು ನೋಡಿಲ್ಲ. ಸದರಿಯವರು ತೀರಿಕೊಂಡಿರುತ್ತಾರೆ. ಸದರಿಯವರು ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಬಸವರಾಜ ತಂದೆ ಪೂಜಾರ ಹನುಮಂತಪ್ಪ ಎನ್ನುವವರು ನಮ್ಮ ಗ್ರಾಮದವರು ಎಂದರೆ ಸರಿ. ಸದರಿ ಬಸವರಾಜ ಪೊಲೀಸ್ ಇಲಾಖೆಯಲ್ಲಿ ತುರ್ತು ವಾಹನದ ಚಾಲಕನಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಸದರಿಯವರು ನನ್ನ ಸಂಬಂಧಿಕರಲ್ಲ. ಆರೋಪಿಯ ಮಗನ ಹೆಸರು ಅರುಣ ಕುಮಾರ. ಪ್ರಕಾಶ ತಂದೆ ಮಲ್ಲೇಶಪ್ಪ ಎನ್ನುವವರ ಪರಿಚಯ ನನಗೆ ಇದೆ ಎಂದರೆ ಸರಿ. ಸದರಿ ಬಸವರಾಜ ಮತ್ತು ಅರುಣ ಕುಮಾರ ಸ್ನೇಹಿತರು ಎಂದರೆ ಸರಿ. ನನ್ನ ಮತ್ತು ಬಸವರಾಜ ನಡುವೆ ಸಂಬಂಧ ಚೆನ್ನಾಗಿದೆ ಮತ್ತು ವಿಶ್ವಾಸಿಕರು ಎಂದರೆ ಸರಿ. ಸದರಿ ಬಸವರಾಜ ಮತ್ತು ಆರೋಪಿಯ ಮಗ ಅರುಣ ಕುಮಾರ ನಡುವೆ ಹಣಕಾಸಿನ ವ್ಯವಹಾರ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯವಹಾರದ ಭದ್ರತೆಗಾಗಿ ನೀಡಿದ ಚೆಕ್ ನ್ನು ಬಸವರಾಜ ರವರು ನನಗೆ ನೀಡಿದ್ದು, ನಾನು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಸಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿ ಹಣ ಕೊಟ್ಟರೆ, ಹಣ ಕೊಟ್ಟ ದಿನಾಂಕವನ್ನು ಬರೆದು ಇಟ್ಟುಕೊಳ್ಳುತ್ತಾರೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಯಾರಿಗಾದರೂ ಹಣ ನೀಡಿದರೆ ಅದನ್ನು ಬರೆದು ಇಡುವ ರೂಢಿ ನನಗೆ ಇಲ್ಲ. ನಾನು ಆರೋಪಿಗೆ ಹಣ ಕೊಟ್ಟಿಲ್ಲ ಆದ್ದರಿಂದ ದಿನಾಂಕ ಬರೆದು ಇಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ದಿನಾಂಕ 28.02.2020 ರಂದು ನಾನು ಆರೋಪಿಗೆ ನೋಟಿಸನ್ನು ನೀಡಿರುತ್ತೇನೆ. ಸದರಿ ನೋಟಿಸ್ ಆರೋಪಿಗೆ ಜಾರಿಯಾಗಿರುತ್ತದೆ. ಆರೋಪಿಯು ನಾನು ನೀಡಿರುವ ನೋಟಿಸಿಗೆ ಮರು ಉತ್ತರ ನೀಡಿದ್ದಾರೋ ಇಲ್ಲವೋ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆಯದೇ ಇದ್ದುದ್ದರಿಂದ ನಾನು ಈ ವಿಚಾರವನ್ನು ಕೇಳಿ ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಬಸವರಾಜ ಬಹಳ ವಿಶ್ವಾಸಿಕರಾಗಿದ್ದರಿಂದ ಅವರಿಗೆ ಅನುಕೂಲವಾಗಲೆಂದು ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ಸರ್ಕಾರಿ ನೌಕರರಾಗಿದ್ದರಿಂದ ಅವರು ಪ್ರಕರಣ ದಾಖಲಿಸಲು ಬರುವುದಿಲ್ಲವೆಂದು ನನ್ನ ಹಾಗೂ ಇನ್ನಿತರೇ ವ್ಯಕ್ತಿಗಳಿಂದ ಈ ರೀತಿ ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬಸವರಾಜ ರವರಿಗೆ ಭದ್ರತೆಗಾಗಿ ನೀಡಿದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ನನ್ನ ಮೂಲಕ ಈ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯಿಂದ ಹೆಚ್ಚಿನ ಹಣ ಪಡೆಯಲು ಬಸವರಾಜರವರು ನನ್ನ ಮೂಲಕ ಈ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

**ದಿಃ 14.07.2023** **ಸಿಸಿ 1325/2020**

**ಪಿಡಬ್ಲ್ಯೂ 1**

ಸದರಿಯವರ ಮಾತು ಕೇಳಿಕೊಂಡು ಸುಳ್ಳು ಪಿರ್ಯಾದಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂ ತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ಹರಿಹರ